**ಓ.ಎಸ್. ಸಂಖ್ಯೆಃ 3/2015**

**ಪಿ.ಡಬ್ಲ್ಯೂಃ 1**

ದಿನಾಂಕಃ 26.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಯ ಪರ ಶ್ರೀ ಯು ಸಿ ವಕೀಲರಿಂದ**

1. ಪ್ರತಿವಾದಿ ನಂ 3 ಹಾಗೂ ನಾವು ಸಂಬಂಧಿಕರಲ್ಲ. ಸರ್ವೆ ನಂ 44 ಕ್ಕೆ ಸಂಬಂದಪಟ್ಟ ಪಹಣಿ ಪತ್ರಿಕೆಗಳಲ್ಲಿ ನಮೂದು ಇರುವ ಯಂಕಪ್ಪ ತಂದೆ ಅಯ್ಯಪ್ಪ ನಮಗೆ ಸಂಬಂದಿಕರಲ್ಲ. ಅವರು ನಮ್ಮ ಹೊಲದ ಪಕ್ಕದಲ್ಲಿ ಇರುವವರು. ಸದರಿ ಆಸ್ತಿ ನನ್ನ ತಂದೆ ತಾಯಿ ಖರೀದಿ ಮಾಡಿದ ಆಸ್ತಿ ಆದ್ದರಿಂದ ಅದಕ್ಕೆ ಸಂಬಂದಪಟ್ಟ ಪಹಣಿ ಪತ್ರಿಕೆಗಳನ್ನು ನಾನು ಹಾಜರುಪಡಿಸಿದ್ದೇನೆ. ನನ್ನ ತಂದೆ ತಾಯಿ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನಾನು ವಾದ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ಸದರಿ ಕ್ರಯ ಪತ್ರವನ್ನು ನಾನು ಹಾಜರುಪಡಿಸಿದ್ದೇನೆ. ನಾನು ಅಂತಹ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿಃ 14 ರಿಂದ 30 ರಲ್ಲಿನ ಕಲಂ 9 ಮತ್ತು 12 ರಲ್ಲಿ ಪ್ರತಿವಾದಿ 3 ಹಾಗೂ ಅವರ ಕುಟುಂಬಸ್ಧರ ಹೆಸರುಗಳು ನಮೂದು ಇದೆ ಎಂದರೆ ಸರಿ. ಪ್ರತಿವಾದಿ ನಂ 3 ರವರ ಹೆಸರಿಗೆ ಆದ ಹಕ್ಕು ಬದಲಾವಣೆ ಆದೇಶವನ್ನು ನಾನು ಪ್ರಶ್ನಿಸಿಲ್ಲ. ಸರ್ವೆ ನಂ 44 ರಲ್ಲಿನ 90 ಸೆಂಟ್ಸ ಜಮೀನನ್ನು ನಾನು ಸಾಗುವಳಿ ಮಾಡುವ ಬಗ್ಗೆ ನಾನು ಪೋಟೋ ಅಥವ ಕಂದಾಯ ರಶೀದಿ ದಾಖಲೆಗಳನ್ನು ಹಾಜರುಡಿಪಸಿಲ್ಲ ಎಂದರೆ ಸರಿ.

2. ಪ್ರತಿವಾದಿ ನಂ 3 ರವರ ತಂದೆ ಯಂಕಪ್ಪ ಹಾಗೂ ಅಜ್ಜ ಅಯ್ಯಪ್ಪ ಎಂದರೆ ಸರಿ. ಪ್ರತಿವಾದಿ ನಂ 3 ರವರ ಕುಟುಂಬದಲ್ಲಿ ಭಾಗ ಆದ ನಂತರ ಕಂದಾಯ ದಾಖಲೆಗಳಲ್ಲಿ ಅವರ ಹೆಸರು ನಮೂದು ಆಗಿದೆ ಎಂದರೆ ಇರಬಹುದು. ಪ್ರತಿವಾದಿ ನಂ 3 ರವರಿಂದ ಸರ್ವೆ ನಂ 44 ಆಸ್ತಿಯನ್ನು ಖರೀದಿ ಮಾಡದೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 44 ರ ಆಸ್ತಿ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಪ್ರತಿವಾದಿ ನಂ 3 ಮಾಲೀಕರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**